**ದಿನಾಂಕ: 21-01-2013 ರಂದು ಮಧ್ಯಾಹ್ನ 12-00 ಘಂಟೆಗೆ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ಶ್ರೀ ಅನಂತಕುಮಾರ ಹೆಗಡೆ ಮಾನ್ಯ ಲೋಕಸಭಾ ಸದಸ್ಯರು 12-ಉತ್ತರಕನ್ನಡ ಕ್ಷೇತ್ರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಜಿಲ್ಲಾ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಯ ನಡವಳಿಗಳು.**

ಪ್ರಾರಂಭದಲ್ಲಿ ಉಪಕಾರ್ಯದರ್ಶಿ(ಆಡಳಿತ) ಜಿಲ್ಲಾ ಪಂಚಾಯತ ರವರು, ಸಭೆಗೆ ಆಗಮಿಸಿದ ಮಾನ್ಯ ಶ್ರೀ ಅನಂತಕುಮಾರ ಹೆಗಡೆ ಸನ್ಮಾನ್ಯ ಲೋಕಸಭಾ ಸದಸ್ಯರು 12-ಉತ್ತರಕನ್ನಡ ಕ್ಷೇತ್ರ ಹಾಗೂ ಅಧ್ಯಕ್ಷರು ಜಿಲ್ಲಾ ಮಟ್ಟದ ಜಾಗೃತ ಮತ್ತು ಮೇಲ್ವಿಚಾರಣಾ ಸಮಿತಿ ಕಾರವಾರ ರವರಿಗೆ ಸ್ವಾಗತ ಕೋರಿದರು. ಅದರಂತೆ ತಾಲೂಕ ಪಂಚಾಯತ್ ಅಧ್ಯಕ್ಷರನ್ನು ಸ್ವಾಗತಿಸಿದರು. ಮತ್ತು ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಇಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡುವಂತೆ ಸನ್ಮಾನ್ಯ ಲೋಕಸಭಾ ಸದಸ್ಯರಲ್ಲಿ ವಿನಂತಿಸಿಕೊಂಡರು.

ಮಾನ್ಯ ಲೋಕಸಭಾ ಸದಸ್ಯರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಪ್ರಾರಂಭದಲ್ಲಿ ಹಿಂದಿನ ಸಭೆಯ ನಡವಳಿಗಳ ಮೇಲೆ ಇಲಾಖೆಯವರು ತೆಗೆದುಕೊಂಡ ಪಾಲನಾ ವರದಿಯನ್ನು ಪರಿಶೀಲಿಸಿ, ವಿವಿಧ ಇಲಾಖೆಗಳ ಕೇಂದ್ರ ಸರಕಾರದ ಯೋಜನೆಗಳಡಿ ಇಲಾಖೆಯವರು ಸಾಧಿಸಿದ ಪ್ರಗತಿಯ ಕುರಿತು ಪರಿಶೀಲನೆ ನಡೆಸಿದರು.

**1. ಕೃಷಿ ಇಲಾಖೆ:**

APOF/Imo/Aditi ಸಂಸ್ಥೆಗಳ ಮೂಲಕ ಜೋಯಿಡಾ ತಾಲೂಕಿನ ದೇಶಿ ತಳಿಯಾದ ಕೆಂಪು ಅಕ್ಕಿಗೆ Brand Name ಕ್ರಮಕೈಗೊಳ್ಳಲಾಗಿದೆ.ಎಂದು ಅಧಿಕಾರಿಗಳು ಸಭೆಗೆ ತಿಳಿಸಿದಾಗ, ಸದರಿ ಸಂಸ್ಥೆ ಕಳೆದ 5 ವರ್ಷದಿಂದ ಬ್ರಾಂಡ ನೇಮ ನೀಡುವ ಕಾರ್ಯಮಾಡುತ್ತಿದೆ. ಬ್ರಾಂಡ್ ನೇಮ ನೀಡುವಲ್ಲಿ ಇಲಾಖೆಯ ಪ್ರಯತ್ನ ಏನೂ ನಡೆದಿರುವುದಿಲ್ಲವೆಂದು ತಿಳಿಸಿ, ಇಲಾಖೆ ವತಿಯಿಂದ ಬ್ರಾಂಡ್ ನೇಮ ನೀಡುವಲ್ಲಿ ಪ್ರಯತ್ನಗಳು ಆಗಬೇಕಾಗಿದೆ. ಆ ದೃಷ್ಠಿಯಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಮಣ್ಣು ಮಾದರಿಗಳ ವಿಶ್ಲೇಷಣೆ ಮಾಡಿ ಮಣ್ಣಿನಲ್ಲಿ ಕೊರತೆ ಇರುವ ಪೋಷಕಾಂಶಗಳ ಮಾಹಿತಿ,ಮತ್ತು ರಸಸಾರದ ಮಾಹಿತಿಯನ್ನು ರೈತರಿಗೆ ನೀಡುವಲ್ಲಿ ಇಲಾಖೆ ವತಿಯಿಂದ ಹೆಚ್ಚಿನ ಪ್ರಯತ್ನ ಗಳು ನಡೆದಿಲ್ಲ. ಇದರಿಂದ ರೈತರಿಗೆ ಮಣ್ಣಿನ ಮಾಹಿತಿ ಬಗ್ಗೆ ಕಲ್ಪನೆ ಮೂಡುತಿಲ್ಲ. ಈ ವಿಷಯದ ಕುರಿತು ಇನ್ನೊಮ್ಮೆ ಕಾರ್ಯಕ್ರಮಗಳನ್ನು ಹಾಕಿಕೊಂಡು,ತಾಲೂಕುವಾರು ಇರುವ ತರಬೇತಿ ಕೇಂದ್ರಗಳಲ್ಲಿ ರೈತರಿಗೆ ತರಬೇತಿ ನೀಡಿ,ಗ್ರಾಮ ಪಂಚಾಯತಗಳಲ್ಲಿ ಗೋಡೆಬರಹ,ನೋಟಿಸ್ ಬೋರ್ಡ,ಮ್ಯಾಪ್‌ಗಳನ್ನು ಹಾಕುವುದು ಇತ್ಯಾದಿಗಳ ಮೂಲಕ ರೈತರಿಗೆ ಮಣ್ಣಿನ ಬಗ್ಗೆ ಸಂಪೂರ್ಣ ಮಾಹಿತಿ,ತಿಳುವಳಿಕೆ ಬರುವಂತೆ ಕ್ರಮ ವಹಿಸಿಸಲು ಸೂಚಿಸಿ,ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ನೀಡುವಂತೆ ತಿಳಿಸಲಾಯಿತು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ )**

**2. ತೋಟಗಾರಿಕೆ ಇಲಾಖೆ:**

ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳ ಇಳುವರಿ ಹಾಗೂ ವಿಸ್ತೀರ್ಣ ಹೆಚ್ಚಿಸುವ ಬಗ್ಗೆ ಕ್ರಮ ವಹಿಸಿದ್ದು, ಕಳೆದ ಸಾಲಿನಲ್ಲಿ 24,526 ಹೆ. ಇದ್ದು, ಈ ಸಾಲಿನಲ್ಲಿ 36,684 ಹೆ. ವಿಸ್ತೀರ್ಣ ಆಗಿರುತ್ತದೆ. ನಿವ್ವಳ 12,158 ಹೆ. ವಿಸ್ತೀರ್ಣ ಹೆಚ್ಚುವರಿ ಆಗಿರುವುದಾಗಿ ಉಪನಿರ್ದೇಶಕರು,ತೋಟಗಾರಿಕೆ ಇಲಾಖೆ ಸಿರ್ಸಿ ರವರು ಸಭೆಗೆ ತಿಳಿಸಿದರು.

130

ಇನ್ನು ಹೆಚ್ಚಿನ ಪ್ರದೇಶಗಳಲ್ಲಿ ತೋಟಗಾರಿಕಾ ಬೆಳೆಗಳ ಇಳುವರಿ ಹಾಗೂ ವಿಸ್ತೀರ್ಣ ಹೆಚ್ಚಿಸುವ ಬಗ್ಗೆ ಕ್ರಮ ವಹಿವಂತೆ ಸೂಚಿಸಲಾಯಿತು.

N.H.M ಕಾರ್ಯಕ್ರಮದಡಿ ರೈತರಿಗೆ ಕಾಳುಮೆಣಸು ಹಾಗೂ ಗೇರು ಗಿಡಗಳ ಜೊತೆಗೆ ಜಿಲ್ಲೆಯ ವಾತಾವರಣಕ್ಕೆ ಹೊಂದಿಕೊಂಡು ನಿರಂತರ ಆದಾಯ ನೀಡುವ ತೋಟಗಾರಿಕಾ ಬೆಳೆಗಳನ್ನು ಬೆಳೆಸುವ ಕುರಿತು ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

ತೋಟಗಾರಿಕೆ ಬೆಳೆಗಳಿಗೆ ಮಾರುಕಟ್ಟೆ ಅಭಿವೃದ್ಧಿ ಹಾಗೂ ಬೀಜಗಳ ಉತ್ಪಾದನೆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುವಂತೆ ಸೂಚಿಸಲಾಯಿತು.

**(ಕ್ರಮ:ಉಪನಿರ್ದೇಶಕರು,ತೋಟಗಾರಿಕೆ ಇಲಾಖೆ, ಸಿರ್ಸಿ)**

**3.ಇಂದಿರಾ ಆವಾಸ ಯೋಜನೆ:**

ವಿವಿಧ ಯೋಜನೆಗಳ ಅಡಿಯಲ್ಲಿ ನಿರ್ಮಿಸುವ ಮನೆಗಳಲ್ಲಿ ಡ್ರೈಪಿಟ್ ತಂತ್ರಜ್ಞಾನ ಅಳವಡಿಸುವ ಕುರಿತು ತಜ್ಞರ ಸಲಹೆಯನ್ನು ಪಡೆದುಕೊಳ್ಳಬೇಕು. Zero Maintenance toilet ಡ್ರೈಪಿಟ್ ತಂತ್ರಜ್ಞಾನದ ಮಾಹಿತಿಯನ್ನು ಜಿಲ್ಲಾ ಕೈಗಾರಿಕಾ ಇಲಾಖಾ ಅಧಿಕಾರಿ ಇವರ ಸಹಕಾರ ಪಡೆದುಕೊಳ್ಳುವಂತೆ ತಿಳಿಸಿದರು.

ಈ ಯೋಜನೆಯಡಿ ಪ್ರಗತಿ ಪರಿಶೀಲಿಸಲಾಗಿ,ಪ್ರಗತಿ ತೀರಾ ಕುಂಠಿತವಾಗಿದ್ದು, ಶೇ. 38 ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿದೆ. ಜಾಗ, ನೊಂದಣಿ ಇತ್ಯಾದಿಗಳಿಂದ ಪ್ರಗತಿ ಕುಂಠಿತವಾಗಿದ್ದು, ಮನೆಗಳ ನಿರ್ಮಾಣ ಕಾರ್ಯ ನಿಧಾನಗತಿಯಲ್ಲಿ ನಡೆಯುತ್ತಿದ್ದು,ಇನ್ನು ಮುಂದೆ ಫಲಾನುಭವಿಗಳು ನಿವೇಶನಗಳನ್ನು ಸಬ್ ರಜಿಸ್ಟ್ರಾರ್ ಕಛೇರಿಯಲ್ಲಿ ನೊಂದಣಿ ಮಾಡುವ ಅಗತ್ಯ ಇರುವುದಿಲ್ಲ, ಈ ಕುರಿತಂತೆ ಬೆಳಗಾವಿಯಲ್ಲಿ ನಡೆದ ಅಧಿವೇಶನದ ಸಂದರ್ಭದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂಬ ವಿಷಯವನ್ನು ಮಾನ್ಯ ಸಚಿವರು ತ್ರೈಮಾಸಿಕ ಕೆ.ಡಿ.ಪಿ.ಸಭೆಯಲ್ಲಿ ತಿಳಿಸಿದ್ದು, ರಾಜೀವ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಲಿ. ನಿಗಮದಿಂದ ಸುತ್ತೋಲೆ ಬಂದ ನಂತರ ಪ್ರಗತಿ ಸಾಧಿಸಲಾಗುವುದು ಎಂದು ಉಪಕಾರ್ಯದರ್ಶಿ(ಆಡಳಿತ) ರವರು ಸಭೆಗೆ ವಿವರಿಸಿದರು.

ಇಂದಿರಾ ಆವಾಸ ಯೋಜನೆಯಡಿ ಮನೆಗಳ ನಿರ್ಮಾಣ ಕಾಮಗಾರಿ ಚುರುಕುಗೊಳಿಸಬೇಕು. ಜಿಲ್ಲೆಗೆ ಯೋಜನೆಯಡಿ 4910 ಮನೆಗಳು ಮಂಜೂರಾಗಿದ್ದು, ಇದುವರೆಗೆ ಕೇವಲ 1285 ಮನೆಗಳು ಪೂರ್ಣಗೊಂಡಿವೆ. ಬಾಕಿ ಇರುವ ಮನೆಗಳನ್ನು ನಿರ್ಮಿಸುವಲ್ಲಿ ಇರುವ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಪೂರ್ಣಗೊಳಿಸುವಂತೆ ತಿಳಿಸಿದರು,

ರಾಜೀವ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ಲಿ. ನಿಗಮದಿಂದ ಸುತ್ತೋಲೆ ಪ್ರತಿಯನ್ನು ತಮಗೆ ಸಲ್ಲಿಸುವಂತೆ ತಿಳಿಸಿ, ಕಾರ್ಯನಿರ್ವಾಹಕ ಅಧಿಕಾರಿ,ಪಿ.ಡಿ.ಓ. ಕಾರ್ಯದರ್ಶಿಗಳಿಗೆ ಮನಸ್ಥೈರ್ಯ ಕೊಟ್ಟು,ಕೆಲಸ ಮಾಡಿಕೊಳ್ಳುವಂತೆ ತಿಳಿಸಿ, ಪ್ರಗತಿ ಸಾಧಿಸಲು ಹಾಗೂ ಯೋಜನೆ ಅನುಷ್ಠಾನಗೊಳಿಸುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸಲು ಸೂಚಿಸಲಾಯಿತು.

**(ಕ್ರಮ: ಉಪಕಾರ್ಯದರ್ಶಿ(ಅಭಿವೃದ್ಧಿ ),ಜಿ.ಪಂ. ಜಿಲ್ಲಾ ಕೈಗಾರಿಕಾ ಇಲಾಖೆ)**

**4. ನಿರ್ಮಲ ಭಾರತ ಅಭಿಯಾನ:**

ಈ ಯೋಜನೆಯಡಿ ನಿರ್ಮಿಸಲಾಗುತ್ತಿರುವ ಶೌಚಾಲಯಗಳಿಗೆ ಡ್ರೈಪಿಟ್ ತಂತ್ರಜ್ಞಾನ ಅಳವಡಿಸಿದಲ್ಲಿ ಪರಿಸರ ಸ್ನೇಹಿ ಶೌಚಾಲಯ ನಿರ್ಮಿಸಲು ಸಾಧ್ಯವಿದೆ ಎಂದು ತಿಳಿಸಿ, Zero Maintenance toilet

ಡ್ರೈಪಿಟ್ ತಂತ್ರಜ್ಞಾನದ ಮಾಹಿತಿಯನ್ನು ಜಿಲ್ಲಾ ಕೈಗಾರಿಕಾ ಇಲಾಖಾ ಅಧಿಕಾರಿ ಇವರ ಸಹಕಾರ ಪಡೆದುಕೊಂಡು ಅದರಂತೆ ಕ್ರಮ ವಹಿಸಲು ಸೂಚಿಸಿದರು.

ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ನಿರ್ಮಿಸುವ ಶೌಚಾಲಯಗಳ ನಿರ್ವಹಣೆ ಮಾಡುವಲ್ಲಿ ಸಮಸ್ಯೆ ಉಂಟಾಗುತ್ತಿದೆ ಕಾರಣ ಅಂತಹ ಸ್ಥಳಲ್ಲಿ Dry Toilet ಅಳವಡಿಸಲು ಕ್ರಮ ಕೈಗೊಳ್ಳಲು ತಿಳಿಸಿ, Dry Toilet ಗಳ ಮಾಹಿತಿಯನ್ನು ಕೈಗಾರಿಕಾ ಇಲಾಖೆಯವರಿಂದ ತರಿಸಿಕೊಂಡು, ಎರಡು ಮಾದರಿಗಳನ್ನು ಮಾಡುವಂತೆ ತಿಳಿಸಲಾಯಿತು.

ಹಳಿಯಾಳ, ಮುಂಡಗೋಡ ತಾಲೂಕುಗಳಲ್ಲಿ ನಿರ್ಮಿಸಿರುವ ಶೌಚಾಲಯಗಳನ್ನು ಎಷ್ಟು ಜನರು ಉಪಯೋಗಿಸುತ್ತಿದ್ದಾರೆ, ಈ ಕುರಿತು ಮೇಲ್ವಿಚಾರಣೆ ಮಾಡಿ,ವರದಿ ಸಲ್ಲಿಸಲು ಸೂಚಿಸಲಾಯಿತು.

**(ಕ್ರಮ:ಉಪಕಾರ್ಯದರ್ಶಿ(ಆಡಳಿತ), ಜಿ.ಪಂ.,ಜಿಲ್ಲಾ ಕೈಗಾರಿಕಾ ಇಲಾಖೆ)**

## 5. ಎಸ್.ಜಿ.ಎಸ್.ವೈ:

ಎಸ್.ಜಿ.ಎಸ್.ವೈ. ಯಡಿ ಕೌಶಲ್ಯ ತರಬೇತಿ ನೀಡಲು ಅವಕಾಶ ಇದ್ದು, ಜಂಟಿ ನಿರ್ದೇಶಕರು,ಜಿಲ್ಲಾ ಕೈಗಾರಿಕಾ ಕೇಂದ್ರ ಕಾರವಾರ ರವರಲ್ಲಿ ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಗಳು ಇದ್ದು,ಈ ಬಗ್ಗೆ ಯೋಜನಾ ನಿರ್ದೇಶಕರು (ಡಿ.ಆರ್.ಡಿ.ಎ.)ಹಾಗೂ ಜಂಟಿ ನಿರ್ದೇಶಕರು ಕೈಗಾರಿಕಾ ಕೇಂದ್ರ ಕಾರವಾರ ರವರು ಚರ್ಚಿಸಿ, ಅವರ ಸಹಕಾರದಿಂದ SGSY ಯಡಿ Processing ಮತ್ತು Marketing ಕುರಿತು ವಿಶೇಷ ಕೌಶಲ್ಯ ತರಬೇತಿ ನೀಡುವ ಬಗ್ಗೆ ಕಾರ್ಯಕ್ರಮ ರೂಪಿಸಿ ಅನುಷ್ಠಾನ ಮಾಡುವುದು.

SGSY ಯಡಿ ಸೌಲಭ್ಯ ಪಡೆದ ಸ್ವರೋಜಗಾರಿಗಳಿಗೆ ಮೌಲ್ಯ ಮಾಪನವನ್ನು ನಬಾರ್ಡ ಸಂಸ್ಥೆಗಳ ಮೂಲಕ ಮಾಡಿಸಿ,ವರದಿ ಸಲ್ಲಿಸುವುದು.

ಎಸ್.ಜಿ.ಎಸ್.ವೈ.ಯಡಿ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಉದ್ಯೋಗ ಪಡೆದವರನ್ನು ಹಾಗೂ ನಬಾರ್ಡ ಸಂಸ್ಥೆಯವರು ತಯಾರಿಸಿದ ಪಿ.ಎಲ್.ಪಿ. ವರದಿಯ ಆಧಾರದ ಮೇಲೆ ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಉದ್ಯೋಗವಕಾಶ ಇರುವ ಬಗ್ಗೆ ಹೋಲಿಕೆ ಮಾಡಿ,ಈ ಬಗ್ಗೆ ನಬಾರ್ಡ ಅಧಿಕಾರಿ ಗಳೊಂದಿಗೆ ಚರ್ಚಿಸಿ, ಯಾವ ಯಾವ ಆರ್ಥಿಕ ಚಟುವಟಿಕೆಗಳು ಜಿಲ್ಲೆಗೆ ಹೆಚ್ಚಿನ ಉದ್ಯೋಗದ ಅವಕಾಶ ಕಲ್ಪಿಸುತ್ತವೆ ಎಂಬ ಬಗ್ಗೆ ವರದಿ ನೀಡಲು ತಿಳಿಸಲಾಯಿತು.

**(ಕ್ರಮ: ಯೋಜನಾ ನಿರ್ದೇಶಕರು,(ಡಿ.ಆರ್.ಡಿ.ಎ.), ಜಂಟಿ ನಿರ್ದೇಶಕರು,ಜಿಲ್ಲಾ ಕೈಗಾರಿಕಾ ಕೇಂದ್ರ ಕಾರವಾರ,ನಬಾರ್ಡ )**

## 6. ಮೀನುಗಾರಿಕೆ ಇಲಾಖೆ:

ಕರಾವಳಿ ತಾಲೂಕುಗಳಲ್ಲಿ ಮೀನುಗಾರಿಕೆ ಯೋಜನೆಗಳ ಬಗ್ಗೆ ಜನಪ್ರತಿನಿಧಿಗಳಗೆ ತಿಳಿಸಿ, ಯೋಜನೆ ಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಸ್ಥಳೀಯವಾಗಿ ಅವಶ್ಯಕ ತರಬೇತಿ ನೀಡುವ ಕುರಿತು ಇಲಾಖೆಯಿಂದ ಕ್ರಮ ಕೈಗೊಂಡಿದ್ದರೂ ಶಿಕ್ಷಣಾರ್ಥಿಗಳು ತರಬೇತಿಗೆ ಹಾಜರಾಗುವುದರಲ್ಲಿ ಆಸಕ್ತಿ ತೋರಿಸುತ್ತಿಲ್ಲ ಎಂದು ಸಹಾಯಕ ನಿರ್ದೇಶಕರು,ಮೀನುಗಾರಿಕೆ ಇಲಾಖೆ ರವರು ತಿಳಿಸಿದರು. ಶಿಕ್ಷಣಾರ್ಥಿಗಳಿಗೆ ತರಬೇತಿ ಆಯೋಜಿಸಿದ ಸ್ಥಳವು ಅನುಕೂಲಕರವಾಗಿಲ್ಲದಿದ್ದಲ್ಲಿ ಪರಿಶೀಲಿಸಿ, ಹೊನ್ನಾವರ ತಾಲೂಕಿನ ಸ್ನೇಹಕುಂಜ ಸಂಸ್ಥೆಯ ಸಹಕಾರ ಪಡೆದುಕೊಂಡು ಪರಿಣಾಮಕಾರಿ ತರಬೇತಿ ನೀಡುವ ಕುರಿತು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

**(ಕ್ರಮ:ಸಹಾಯಕ ನಿರ್ದೇಶಕರು,ಮೀನುಗಾರಿಕೆ ಇಲಾಖೆ)**

128

**7. ಕೈಗಾರಿಕೆ:**

ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಕೈಗೊಳ್ಳಲಾಗುತ್ತಿರುವ ಕಾರ್ಯಕ್ರಮಗಳ ಜೊತೆ SGSY ಕಾರ್ಯಕ್ರಮಗಳನ್ನು ರೂಪಿಸಿ ಜಿಲ್ಲೆಯ ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ನಿಟ್ಟಿನಲ್ಲಿ ತರಬೇತಿ ನೀಡಿ ಅಭಿವ್ಯಕ್ತಿ ತರಬೇತಿ ಕಾರ್ಯಕ್ರಮ ಮಾಡುವಂತೆ ತಿಳಿಸಿ, ಜೀವನಾಂಶಕ್ಕೆ ಸಹಕಾರಿಯಾಗುವಂತೆ ಕ್ರಮ ಕೈಗೊಳ್ಳಲು ತಿಳಿಸಿ, ಅನುದಾನವನ್ನು SGSY ಯೋಜನೆಯಿಂದ ಭರಿಸಿಕೊಳ್ಳುವಂತೆ ತಿಳಿಸಿದರು, ಹಾಗೂ ಯೋಜನೆ ಕುರಿತು ತೆಗೆದುಕೊಂಡ ಕ್ರಮದ ಬಗ್ಗೆ ತಿಳಿಸಲು ಸೂಚಿಸಿದರು.

**(ಕ್ರಮ: ಜಿಲ್ಲಾ ಕೈಗಾರಿಕಾ ಕೇಂದ್ರ,ಶಿರವಾಡ)**

**9. ಜಲಾನಯನ:**

ಹಿಂದಿನ ಸಭೆಯಲ್ಲಿ ಜಲಾನಯನ ಇಲಾಖೆಯ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಸಮಗ್ರ ಅಧ್ಯಯನ ಮಾಡಲು ಪ್ರತ್ಯೇಕವಾಗಿ ಕಾರ್ಯಪಡೆ ರಚಿಸಿಸಲು ತಿಳಿಸಿದ್ದು,ಇದುವರೆಗೂ ಸಮಿತಿಯನ್ನು ರಚಿಸಿರುವುದಿಲ್ಲದರ ಬಗ್ಗೆ ಅಧ್ಯಕ್ಷರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ಕೂಡಲೇ ಜನ ಪ್ರತಿನಿಧಿಗಳು,ತಾಲೂಕ ಪಂಚಾಯತ, ಅಧ್ಯಕ್ಷರನ್ನು, ವಿಜಿಲೆನ್ಸ್ ಕಮಿಟಿ ಸದಸ್ಯರು ಹಾಗೂ ಕಾರ್ಯನಿರ್ವಾಹಕ ಇಂಜಿನೀಯರುಗಳನ್ನೊಂಡ ಸಮಿತಿ ರಚಿಸಿ, 4 ಜನರಿಗೆ ಎರಡು ತಾಲೂಕುಗಳನ್ನು ಜೋಡಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಲ್ಲಿನ ಕಾಮಗಾರಿಗಳ ಮೌಲ್ಯಮಾಪನ ಮಾಡಿ, Base level information ಕೊಡಲು ತಿಳಿಸಿದರು.

ಜಲಾನಯ ಇಲಾಖೆಯ ಪ್ರಗತಿಯನ್ನು ಪರಿಶೀಲಿಸಿ,ಮುಂಡಗೋಡ,ಕಾರವಾರ,ಮತ್ತು ಹಳಿಯಾಳ ತಾಲೂಕುಗಳಲ್ಲಿ ಸಾಧಿಸಿದ ಪ್ರಗತಿ ಕಡಿಮೆಯಾಗಿದ್ದು, ಮುಂದಿನ ದಿನಗಳಲ್ಲಿ 100% ಪ್ರಗತಿಸಾಧಿಸುವಂತೆ ತಿಳಿಸಿ, ಕೇಂದ್ರ ಸರಕಾರದಿಂದ ಬಿಡುಗಡೆಯಾದ ಅನುದಾನ ಖರ್ಚಾಗದೇ ಬಾಕಿ ಇರುವ ಬಗ್ಗೆ ಗಮನಕ್ಕೆ ಬಂದಿದ್ದು, ಕೂಡಲೇ ಅನುದಾನ ಪರಿಣಾಮಕಾರಿಯಾಗಿ ನಿಯಮಾನುಸಾರ ಖರ್ಚುಮಾಡಿ, U.C ಕಳುಹಿಸಿಕೊಡುವಂತೆ ಜಲಾನಯನ ಅಧಿಕಾರಿಗಳಿಗೆ ಸೂಚಿಸಲಾಯಿತು.

**(ಕ್ರಮ: ಜಿಲ್ಲಾ ಜಲಾನಯನ )**

**10.ಡಿ.ಆರ್.ಡಿ.ಎ.**

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರಕ್ಕೆ ಪತ್ರ ವನ್ನು ಬರೆದಿರುವುದಾಗಿ, ಹೊರಗುತ್ತಿಗೆ ಆದಾರದ ಮೇಲೆ ಕೇವಲ ಗ್ರೂಪ್ `ಡಿ` ನೌಕರರನ್ನು ಮಾತ್ರ ನೇಮಿಸಿಕೊಳ್ಳಲು ಅವಕಾಶ ಇರುವುದಾಗಿ ಮುಖ್ಯ ಲೆಕ್ಕಾಧಿಕಾರಿಗಳು ಸಭೆಗೆ ತಿಳಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ಜಿ.ಪಂ.ಕಾರವಾರ)**

**11.ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ:**

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಪ್ರಗತಿಯನ್ನು ಪರಿಶೀಲಿಸಿ, ರೂ.23.05 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಇದುವರೆಗೆ ರೂ. 21.6 ಕೋಟಿ ಅನುದಾನ ವೆಚ್ಚಮಾಡಲಾಗಿದೆ. ಯೋಜನೆಯಡಿ ಸಾಕಷ್ಟು ಅನುದಾನ ಲಭ್ಯವಿದ್ದು, ಸದುಪಯೋಗ ಪಡಿಸಿಕೊಳ್ಳುವಲ್ಲಿ ತಾಲೂಕುವಾರು ಕಮಿಟಿ ರಚಿಸಿ, ಜನಪ್ರತಿನಿದಿಗಳನ್ನು,ತಾಲೂಕ ಪಂಚಾಯತ ಅಧ್ಯಕ್ಷರುಗಳನ್ನು ಸೇರಿಸಿಕೊಂಡು ಯೋಜನಾ ವರದಿಯನ್ನು ತಯಾರಿಸಿ,ಯೋಜನೆಯನ್ನು ಅನುಷ್ಠಾನಗೊಳಿಸಲು ತಿಳಿಸಿ, ತಾಲೂಕ ಪಂಚಾಯತ ಅಧ್ಯಕ್ಷರುಗಳಿಗೆ ಯೋಜನೆ ಬಗ್ಗೆ ಮಾಹಿತಿ ಒದಗಿಸುವಂತೆ ಸೂಚಿಸಲಾಯಿತು.

ಈ ಯೋಜನೆಯಡಿ ಪ್ರಗತಿಯಲ್ಲಿರುವ ಕಾಮಗಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುವುದಾಗಿ, ಭಟ್ಕಳ, ಸಿದ್ದಾಪುರ,ಕುಮಟಾ ಮತ್ತು ಹಳಿಯಾಳ ತಾಲೂಕುಗಳಲ್ಲಿ ಪ್ರಗತಿ ಕುಂಠಿತವಾಗಿದೆ. ಈ ವಿಷಯದ ಕುರಿತು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಿಚಾರಿಸಿದಾಗ,ಅಂಕೋಲಾ ತಾಲೂಕಿನಲ್ಲಿ ಎಂ.ಐ.ಎಸ್. ಮಾಡುವುದು ಬಾಕಿ ಇದೆ. ಅಲ್ಲದೇ ಬ್ಯಾಂಕ ಖಾತೆಗಳನ್ನು ತೆರೆಯುವ ಕೆಲಸ ಇರುವುದಾಗಿ ಸಭೆಗೆ ವಿವರಿಸಿದರು,

ಬ್ಯಾಂಕ್ ಖಾತೆ ತೆರೆಯುವ ಕೆಲಸವನ್ನು Out source ಮೂಲಕ ಮಾಡಿಕೊಳ್ಳಲು ಜಿಲ್ಲಾ ಆಡಳಿತಕ್ಕೆ ಅಧಿಕಾರ ಇರುವುದರಿಂದ. ಅವರಿಂದ ಕೆಲಸ ಮಾಡಿಸಿಕೊಳ್ಳುವಂತೆ ಪರಿಶೀಲಿಸಿ,ಮಂಜೂರಾದ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ಹೆಚ್ಚಿನ ಆಸಕ್ತಿ ವಹಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕುವಾರು ಕಾಮಗಾರಿಗಳಲ್ಲಿ ಭಟ್ಕಳ ತಾಲೂಕಿನಲ್ಲಿ 115 ಕಾಮಗಾರಿಗಳು ಮಾತ್ರ ಮಂಜೂರಾಗಿದ್ದು,ಈ ವಿಷಯದ ಕುರಿತು ಗಂಭೀರವಾಗಿ ಯೋಚಿಸಬೇಕಾಗಿದ್ದು ಉಳಿದ ತಾಲೂಕುಗಳಿಗಿಂತ ಭಟ್ಕಳ ತಾಲೂಕಿನಲ್ಲಿ ಕಡಿಮೆ ಕಾಮಗಾರಿಗಳನ್ನು ಕೈಗೊಂಡ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಈ ಬಗ್ಗೆ ಪರಿಶೀಲಿಸಿ, ಕಾರ್ಯನಿರ್ವಾಹಕ ಅಧಿಕಾರಿಗಳು ವೈಯಕ್ತಿಕ ಆಸಕ್ತಿ ವಹಿಸಿ, ಉದ್ಯೋಗ ಆಸಕ್ತರಿಗೆ ಸೂಕ್ತ ಕಾಮಗಾರಿಗಳು ಸೇರ್ಪಡೆಯಾಗುವಂತೆ ಕ್ರಮ ಜರುಗಿಸಲು ಸೂಚಿಸಿದರು.

**(ಕ್ರಮ:ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು )**

**12. ಪಿ.ಎಮ್.ಜಿ.ಎಸ್.ವೈ:**

ಸಿದ್ದಾಪುರ ತಾಲೂಕಿನ ಹುಲಕತ್ರಿ ಕ್ರಾಸ್ ರಸ್ತೆಯಿಂದ 16ನೇ ಮೈಲಿಯವರೆಗೆ ರಸ್ತೆಯನ್ನು ಜನರ ಅನುಕೂಲಕ್ಕಾಗಿ ಹಾರ್ಸಿಕಟ್ಟಾ,ಮುಟ್ಟಳ್ಳಿಯಿಂದ ಪ್ರಾರಂಭಿಸಲು ಸೂಚಿಸಿದ್ದಾಗಿ ಸಭೆಯಲ್ಲಿ ಹೇಳಿದರು. ಅಧ್ಯಕ್ಷರ ಸೂಚನೆಯಂತೆ ಇನ್ನೊಂದು ಬದಿಯಿಂದ ಪ್ರಾರಂಭಿಸುವುದಾಗಿ ಅಧಿಕಾರಿಗಳು ತಿಳಿಸಿದರು. ಮುಂಡಗೋಡ ತಾಲೂಕಿನ ಮಳಗಿ ಮತ್ತು ಉಮ್ಮಚಗಿ ರಸ್ತೆ ಕಾಮಗಾರಿ ಮುಗಿಸಲು ತಿಳಿಸುತ್ತ, ಇಂಗಳಗಿ-ಪಾಳಾ ರಸ್ತೆ ಕುರಿತು ವಿಚಾರಿಸಿದರು. ಈ ಕುರಿತು ಜಾಗದ ಸಮಸ್ಯೆಯಿಂದ ಕೈಗೊಳ್ಳಾಗದೇ ಇದ್ದು, ಜನರ ಮನವೊಲಿಸಿ ರಸ್ತೆಗಾಗಿ ಮರು ಟೆಂಡರ್ ಕರೆಯಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಬಾಕಿ ಇರುವ ಎಲ್ಲಾ ರಸ್ತೆ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಿ, ಉತ್ತಮ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸುವಂತೆ ಹಾಗೂ ಪ್ರಗತಿ ವರದಿ ನೀಡುವಂತೆ ಕಾರ್ಯನಿರ್ವಾಹಕ ಅಭಿಯಂತರರು, ಪಿ.ಎಂ.ಜಿ.ಎಸ್.ವೈ.ರವರಿಗೆ ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜಿನೀಯರ್ ಪಿ.ಎಂ.ಜಿ.ಎಸ್.ವಾಯ್.)**

**13.ಕುಡಿಯುವ ನೀರು( ಎನ್.ಆರ್.ಡಿ.ಡಬ್ಲ್ಯ.ಎಸ್.):**

ಸಿರ್ಸಿ,ಸಿದ್ದಾಪುರ,ಯಲ್ಲಾಪುರ ತಾಲೂಕುಗಳಲ್ಲಿ ನೀರಿನ ಮೂಲಗಳು ಕಡಿಮೆ ಸಂಖ್ಯೆಯಲ್ಲಿ ಇರುವದನ್ನು ಪ್ರಗತಿ ವರದಿಯಲ್ಲಿ ತಿಳಿಸಿದ್ದೀರಿ .ಆದರೆ ಖಾಸಗಿಯವರ ನೀರಿನ ಮೂಲಗಳು ಹೆಚ್ಚಿನ ಸಂಖ್ಯೆಯಲ್ಲಿದೆ. ಸಿದ್ದಾಪುರ ತಾಲೂಕಿನಲ್ಲಿ point ಗಳನ್ನು ಗುರುತಿಸುವಲ್ಲಿ ತಪ್ಪಾಗಿದೆ ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು. ಈ ವಿಷಯದ ಕುರಿತು ಗಂಭೀರವಾಗಿ ಚರ್ಚೆ ಮಾಡಿ, ಪರಿಶೀಲಿಸಿ, ನೀರಿನ ಮೂಲಗಳನ್ನು ಹುಡುಕುವಲ್ಲಿ ವಸ್ತು ನಿಷ್ಠತೆಯನ್ನು ಪ್ರತಿಬಿಂಬಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕುಡಿಯುವ ನೀರು ಸರಬರಾಜು ಯೋಜನೆಯಡಿ ಮಂಜೂರಾದ ಕಾಮಗಾರಿಗಳನ್ನು ಮಾರ್ಚ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದು. ಈ ಯೋಜನೆಯಡಿ ಇನ್ನು 5 ಕೋಟಿ ಅನುದಾನ ಲಭ್ಯವಿದ್ದು, ಕ್ರಿಯಾ ಯೋಜನೆ ಕೂಡ ಅನುಮೋದನೆಯಾಗಿದೆ. ಸದರಿ ಯೋಜನೆಯಡಿ, 1515 ಕಾಮಗಾರಿಗಳು ಮಂಜೂರಾಗಿದ್ದು, 497 ಕಾಮಗಾರಿಗಳು ಇದುವರೆಗೂ ಪ್ರಾರಂಭವಾಗಿರುವುದಿಲ್ಲ. ಅನುಷ್ಠಾನದಲ್ಲಿ ತಾಂತ್ರಿಕ ತೊಡಕುಗಳನ್ನು ಬಗೆಹರಿಸಿಕೊಂಡು, ವಿದ್ಯುತ್ ಸಂಪರ್ಕ ಕಲ್ಪಿಸುವುದು ಬಾಕಿ ಇದ್ದಲ್ಲಿ ಕೂಡಲೇ ಹೆಸ್ಕಾಂ ರವರಿಂದ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡು, ಮಾರ್ಚ ತಿಂಗಳೊಳಗೆ ನಿಯಮಾನುಸಾರ ವೆಚ್ಚ ಮಾಡಿ ತಾಲೂಕುವಾರು ವೆಚ್ಚದ ವಿವರವಾದ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಯಿತು.

ಸಮಿತಿ ಸದಸ್ಯರು ಹೊನ್ನಾವರ ತಾಲೂಕಿನ ಬಳಕೂರು ಪಂಚಾಯತದ ಹಲಸಿನಡಿ ಕೇರಿ, ಮೆಲಗಿ ನಕೇರಿ ಎಂಬಲ್ಲಿ NRDWP ಅಡಿ ಕುಡಿಯುವ ನೀರಿನ ಟ್ಯಾಂಕ ನಿರ್ಮಿಸಿ, ಪೈಪ್ ಲೈನ ಕೂಡ ಹಾಕಿರುತ್ತಾರೆ ಆದರೆ ನೀರು ಮಾತ್ರ ಇರುವುದಿಲ್ಲ. ಕುಡಿಯುವ ನೀರಿನ ಬಾವಿ ಇಲ್ಲದೇ ಬಿಲ್ ಪಾವತಿ ಮಾಡಲಾಗಿದೆ ಎಂಬ ವಿಷಯನ್ನು ಸಭೆಯ ಗಮನಕ್ಕೆ ತಂದಾಗ, ಕ್ರಿಯಾ ಯೋಜನೆಯಲ್ಲಿ ತೋರಿಸಿದ ಹಾಗೂ ಹಣ ಪಾವತಿಯಾದ ಬಾವಿ/ಕೆರೆ ಕಾಮಗಾರಿಗಳ ಸ್ಥಳ ತನಿಖೆಗೊಳಿಸಿ, ವರದಿ ನೀಡುವಂತೆ ಮುಖ್ಯ ಲೆಕ್ಕಾಧಿಕಾರಿ ರವರಿಗೆ ತಿಳಿಸಿದ್ದು, ಅವರು ದಿನಾಂಕ: 16-01-2013 ರಂದು ಸಲ್ಲಿಸಿರುತ್ತಾರೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದಾಗ ವರದಿ ಪರಿಶೀಲಿಸಿ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸರಕಾರಕ್ಕೆ ವರದಿ ಸಲ್ಲಿಸುವಂತೆ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರಿಗೆ ಅಧ್ಯಕ್ಷರು ತಿಳಿಸಿದರು.

ಯಾವುದೇ ಯೋಜನೆಯಡಿ ನೀರಿನ ಮೂಲ ಗುರುತಿಸಿ, ಅವಶ್ಯಕತೆಗನುಗುಣವಾಗಿ ನೀರು ಲಭ್ಯವಿದ್ದರೆ ಕ್ರಿಯಾ ಯೋಜನೆ ತಯಾರಿಸಬೇಕು. ನೀರಿನ ಮೂಲವಿಲ್ಲದೇ ಮೊದಲೇ ಟ್ಯಾಂಕ್ ನಿರ್ಮಿಸಿ, ಪೈಪ್ ಲೈನ್ ಹಾಕಿ ಅನಗತ್ಯ ಖರ್ಚು ಮಾಡಿ ಕೊನೆಯಲ್ಲಿ ಉಪಯೋಗಕ್ಕೆ ಬಾರದೇ ಇದ್ದರೆ ಏನು ಪ್ರಯೋಜನ. ಅನುಮೋದನೆಯಾದ ಕ್ರಿಯಾ ಯೋಜನೆಗೆ ಮಂಜೂರಾತಿ ಕೊಡುವಾಗ 3rd Party ಯಿಂದ monitor ಮಾಡಿ, ವರದಿ ಕೊಟ್ಟ ನಂತರ ತಾಂತ್ರಿಕ ಅನುಮೋದನೆ ನೀಡುವಂತೆ ತಿಳಿಸಿ, ಕ್ರಿಯಾ ಯೋಜನೆ ತಯಾರಿಸುವಾಗ ಮೊದಲು ನೀರಿನ ಮೂಲದ Stage-1 ರಲ್ಲಿ ಮತ್ತು ಪೈಪ್‌ಲೈನ್ ಹಾಕಲು Stage-2 ರಲ್ಲಿ ಅಂದಾಜು ಪತ್ರಿಕೆ ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಭಿಯಂತರಿಗೆ ಸೂಚಿಸಲಾಯಿತು.

**(ಕ್ರಮ: ಕಾ.ನಿ.ಅಭಿಯಂತರರು PRED ಕಾರವಾರ/ಶಿರಸಿ, ಎಲ್ಲಾ ತಾಲೂಕಾ ಸಹಾಯಕ ಕಾ.ನಿ.ಅಭಿಯಂತರು)**

**14.ಎನ್.ಎಸ್.ಎ.ಪಿ.:**

ಜಿಲ್ಲಾಧಿಕಾರಿಗಳಾಗಲಿ, ಅಪರ ಜಿಲ್ಲಾಧಿಕಾರಿಗಳಾಗಲಿ ಸಭೆಯಲ್ಲಿ ಹಾಜರಿಲ್ಲದಿರುವುದರಿಂದ ಈ ಕುರಿತು ಪರಿಶೀಲನೆ ನೆರವೇರಿಸಲಾಗಿಲ್ಲ. ಹೊಸದಾಗಿ ಬಂದಿರುವ ಕುಮಟಾ ಉಪವಿಭಾಗಾಧಿಕಾರಿಯವರು ಸಭೆಗೆ ಸರಿಯಾಗಿ ಮಾಹಿತಿಯನ್ನು ಕೊಡಲು ವಿಫಲರಾಗಿರುವುದರಿಂದ ಮುಂದಿನ ಸಭೆಯಲ್ಲಿ ಕಡ್ಡಾಯವಾಗಿ ಜಿಲ್ಲಾಧಿಕಾರಿಗಳಾಗಲಿ,ಅವರ ಪ್ರತಿನಿಧಿಯಾಗಿ ಅಪರ ಜಿಲ್ಲಾಧಿಕಾರಿಗಳು ಹಾಜರಿರುವಂತೆ ಅಧ್ಯಕ್ಷರು ಸೂಚಿಸಿದರು.

**15. ಸರ್ವ ಶಿಕ್ಷಾ ಅಭಿಯಾನ:**

ಈ ಯೋಜನೆಯಡಿಯಲ್ಲಿ ಸಿವಿಲ್ ಕಾಮಗಾರಿಗಳ ಪ್ರಗತಿ ಪರಿಶೀಲಿಸಿ, ಶಿಕ್ಷಣ ಇಲಾಖೆಯ ಕಾರವಾರ, ಕುಮಟಾ, ಭಟ್ಕಳ, ಸಿರ್ಸಿ, ಯಲ್ಲಾಪುರ, ಮುಂಡಗೋಡ ತಾಲೂಕುಗಳಲ್ಲಿ

ಮುಖ್ಯೋಪಾದ್ಯಾಯರ ಕೊಠಡಿ ಕಾಮಗಾರಿಗಳು ಬಾಕಿ ಇವೆ, 150 ಹೆಚ್ಚುವರಿ ಕೊಠಡಿಗಳಲ್ಲಿ 57 ಕೊಠಡಿಗಳು ಪೂರ್ಣಗೊಂಡಿರುವುದಾಗಿ ಡಿ.ಡಿ.ಪಿ.ಐ. ರವರು ಸಭೆಗೆ ತಿಳಿಸಿದರು. ಈ ತಿಂಗಳ ಕೊನೆಯಲ್ಲಿ ಬಾಕಿ ಇರುವ ಎಲ್ಲಾ ಕೊಠಡಿಗಳನ್ನು ಪೂರ್ಣಗೊಳಿಸಲು ಅಧ್ಯಕ್ಷರು ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

**(ಅನಂತ ಕುಮಾರ ಹೆಗಡೆ)**
**ಲೋಕಸಭಾ ಸದಸ್ಯರು,**
**ಹಾಗೂ ಅಧ್ಯಕ್ಷರು ಜಿಲ್ಲಾ ಮಟ್ಟದ ಜಾಗೃತ**
**ಮತ್ತು ಮೇಲ್ವಿಚಾರಣಾ ಸಮಿತಿ, ಉತ್ತರ ಕನ್ನಡ.**

124

ಸಂಖ್ಯೆ.ಉಕಜಿ.ಪ.ಯೋಜನೆ.ಜಿಜಾಮೇಸ.ನಡವಳಿ/12-13

ಉ.ಕ. ಜಿಲ್ಲಾ ಪಂಚಾಯತ ಕಾರ್ಯಾಲಯ
ಯೋಜನಾ ಶಾಖೆ,
ಕಾರವಾರ, ದಿನಾಂಕ:೨೬ - 02-2012.

<u>ಪ್ರತಿಯನ್ನು ಗೌರವ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ:</u>

1. ಆಪ್ತ ಕಾರ್ಯದರ್ಶಿಗಳು ಮಾನ್ಯ ಲೋಕಸಭಾ ಸದಸ್ಯರು, ಕೆನರಾ ಕ್ಷೇತ್ರ, ಕಾರವಾರ ಇವರಿಗೆ ಮಾಹಿತಿಗಾಗಿ.
2. ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ರಾಜ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ಮಾನ್ಯ ಮೀನುಗಾರಿಕಾ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು ಇವರಿಗೆ ಮಾಹಿತಿಗಾಗಿ.
4. ಶ್ರೀ.ಸುನೀಲ ಹೆಗಡೆ, ಮಾನ್ಯ ವಿಧಾನ ಸಭಾ ಸದಸ್ಯರು, ಹಳಿಯಾಳ.
5. ಶ್ರೀ.ವಿ.ಎಸ್.ಪಾಟೀಲ್, ಮಾನ್ಯ ವಿಧಾನ ಸಭಾ ಸದಸ್ಯರು,ಯಲ್ಲಾಪುರ.
6. ಶ್ರೀ.ಜೆ.ಡಿ.ನಾಯ್ಕ, ಮಾನ್ಯ ವಿಧಾನ ಸಭಾ ಸದಸ್ಯರು,ಭಟ್ಕಳ.
7. ಶ್ರೀ.ದಿನಕರ ಶೆಟ್ಟಿ, ಮಾನ್ಯ ವಿಧಾನ ಸಭಾ ಸದಸ್ಯರು, ಕುಮಟಾ.
8. ಶ್ರೀ.ಎಸ್.ಎಲ್.ಘೋಟ್ನೇಕರ,ಮಾನ್ಯ ವಿಧಾನ ಪರಿಷತ್ ಸದಸ್ಯರು,ಹಳಿಯಾಳ.
9. ಅಧ್ಯಕ್ಷರು, ಜಿಲ್ಲಾ ಪಂಚಾಯತ,ಉತ್ತರ ಕನ್ನಡ, ಕಾರವಾರ..
10. ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ ಅಧ್ಯಕ್ಷರು.
11. ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ.
12. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ, ಉ.ಕ.ಕಾರವಾರ.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ನಡವಳಿಗಳ ಮೇಲೆ ಅನುಪಾಲನಾ ವರದಿ ಸಲ್ಲಿಸಲು ತಿಳಿಸಿ ರವಾನಿಸಿದೆ.

1. ಉಪಕಾರ್ಯದರ್ಶಿ(ಆಡಳಿತ)/ಅಭಿವೃದ್ಧಿ),ಯೋಜನಾನಿರ್ದೇಶಕರು,( ಎಸ್.ಜಿ.ಎಸ್.ವೈ/ಡಿಆರ್‌ಡಿಎ), ಜಿ.ಪಂ.ಕಾರವಾರ.
2. ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾಜ್.ಇಂಜಿನಿಯರಿಂಗ ವಿಭಾಗ, ಕಾರವಾರ/ಶಿರ್ಶಿ
3. ಜಿಲ್ಲೆಯ ಎಲ್ಲಾ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು
4. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಕಾರವಾರ
5. ಡಿಸ್ಟ್ರಿಕ್ಟ್ ಪ್ರೊಜೆಕ್ಟ್ ಮೆನೆಜರ್,ಜಲನಿರ್ಮಲ,ಕಾರವಾರ
6. ಸಹಾಯಕ ಕಮೀಶನರ್, ಕಾರವಾರ/ಕುಮಟಾ/ಭಟ್ಕಳ/ಶಿರಸಿ
7. ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಗೆ.

SVMahal
ಮುಖ್ಯ ಯೋಜನಾಧಿಕಾರಿ,
ಜಿಲ್ಲಾ ಪಂಚಾಯತ್, ಉತ್ತರ ಕನ್ನಡ.
ಕಾರವಾರ. ಸರನಾರಿ